ಗ್ರಾಮ ಪಂಚಾಯತ್‌ಗಳಿಗೆ ಅನುದಾನ

1502(960), ಶ್ರೀ ಮೊಹೀಯುದ್ದೀನ್ ಬಾವಾ ಬಿ.ಎ.(ಮಂಗಳೂರು ನಗರ ಉತ್ತರ)

ಅ) ಗ್ರಾಮ ಪಂಚಾಯತ್‌ಗಳಿಗೆ 4ನೇ ಕಂತಿನ ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಸದರಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಿದೆ?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) 2013–14ನೇ ಸಾಲಿನ ಶಾಸನಬದ್ಧ ಅನುದಾನದ 4ನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ಗ್ರಾಮ ಪಂಚಾಯತಿಗಳು 2013–14ನೇ ಸಾಲಿನ ತೆರಿಗೆ ವಾರ್ಷಿಕ ಬೇಡಿಕೆಯಲ್ಲಿ ಶೇಕಡಾ 50 ರಷ್ಟನ್ನು ವಸೂಲಿ ಮಾಡಿದ್ದಲ್ಲಿ ಅನುದಾನ ಬಿಡುಗಡೆ ಮಾಡುವುದಾಗಿ ಷರತ್ತನ್ನು ವಿಧಿಸಲಾಗಿತ್ತು. ಪ್ರಸ್ತುತ ಈ ಬಗ್ಗೆ ಗ್ರಾಮ ಪಂಚಾಯತಿಗಳಿಂದ ವಿವರವನ್ನು ಪಡೆಯಲಾಗಿದ್ದು, ಶೀಘ್ರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

R.T.E. ಕಾಯ್ದೆಯಡಿಯಲ್ಲಿ ಆಯ್ಕೆಯಾಗಿರುವ ವಿದ್ಯಾರ್ಥಿಗಳು

1503(417), ಶ್ರೀ ಮುನಿರಾಜು. ಎಸ್ (ದಾಸರಹಳ್ಳಿ)

ಅ) ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ ಆಯ್ಕೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಈ ರೀತಿ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಂದ ಖಾಸಗಿ ಶಾಲೆಯವರು ಹೆಚ್ಚುವರಿಯಾಗಿರುವ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕುರಿತು ಎಷ್ಟು ದೂರುಗಳು ದಾಖಲಾಗಿವೆ?

ಇ) ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಶಿಕ್ಷಣ ಹಕ್ಕು ಕಾಯಿದೆ (ಆರ್.ಟಿ.ಇ.) ಕರ್ನಾಟಕ ರಾಜ್ಯದಲ್ಲಿ 2012ನೇ ಸಾಲಿನಿಂದ ಜಾರಿಗೆ ಬಂದಿದ್ದು,

2012–13ನೇ ಶೈಕ್ಷಣಿಕ ಸಾಲಿನಲ್ಲಿ ಆರ್.ಟಿ.ಇ. ಅಡಿ ಶೇ.25 ರ ಮೀಸಲಾತಿ ಅನ್ವಯ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಸೆಕ್ಷನ್ 12(1)(ಸಿ) ಪ್ರಕಾರ ದಾಖಲಾದ ಮಕ್ಕಳ ಸಂಖ್ಯೆ: 49259

2013–14ನೇ ಶೈಕ್ಷಣಿಕ ಸಾಲಿನಲ್ಲಿ ಆರ್.ಟಿ.ಇ. ಅಡಿ ಶೇ.25 ರ ಮೀಸಲಾತಿ ಅನ್ವಯ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಸೆಕ್ಷನ್ 12(1)(ಸಿ) ಪ್ರಕಾರ ದಾಖಲಾದ ಮಕ್ಕಳ ಸಂಖ್ಯೆ: 73440

2014–15ನೇ ಶೈಕ್ಷಣಿಕ ಸಾಲಿನಲ್ಲಿ ಆರ್.ಟಿ.ಇ. ಅಡಿ ಶೇ.25 ರ ಮೀಸಲಾತಿ ಅನ್ವಯ ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿ ಸೆಕ್ಷನ್ 12(1)(ಸಿ) ಪ್ರಕಾರ ದಾಖಲಾದ ಮಕ್ಕಳ ಸಂಖ್ಯೆ: 92543 (ದಿ:01.07.2014)

ಆ) ಇಲ್ಲ.

ಇ) ಈ ರೀತಿಯ ಯಾವುದೇ ಪ್ರಕರಣ ಇರುವುದಿಲ್ಲ.